Regd No B G. 155

Sn

7—1—1965

48 th Year
ನೇ ವರ್ಷ
★
Sri 'Satyavadi'
— DAILY —
MYSORE

ಸತ್ಯವಾದಿ

ಸ್ಥಾಪಕರು— ಅಂದುನೆ ಸಿಂಸ್ಕೆದಾರ್ ಎಂ ವಿ ಸೆಬ್ಬರಾಯರು 2ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ಕಪ್ಪದೆ ಓದಿ
ದಿನ ಪತ್ರಿಕೆ ತಿಂಗಳಿಗೆ 40-ನ ಪೈ

Protect the Cow
ಗೋಸಂರಕ್ಷಣೆ ಮಾಡಿ

ವಾರ್ತಾ ವಿಶೇಷಗಳು

★

ಭಾರತದ ಪ್ರಥಮ ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದರ ಜೀವನಾಕೃತಿಯ ಕಾಂಚನ ಪ್ರತಿಮೆಯನ್ನು ಡುಂಗದಲ್ಲಿ ಪ್ರಕಾಶನಗೊಳಿಸಲಾಯಿತು ಈ ಪ್ರತಿಮೆಗೆ ಹದಿನಾರು ಸಾವಿರ ರೂಪಾಯಿಗಳಾಗಿವೆ.

ಪಾಂಬನ್—ರಾಮೇಶ್ವರದ ಹೆದ್ದಾರಿ ನಿರ್ಮಾಣಕ್ಕೆ ನೂರಹತ್ತು ಲಕ್ಷ ರೂಪಾಯಿಗಳ ವೆಚ್ಚದ ಯೋಜನೆ ಮಾಡಲಾಗಿದೆ ಎಂದು ಮದರಾಸು ವಾರ್ತೆ

ತಿರುವನ್ವೇಲಿಯ ಇಲ್ಲಕ್ಕಿಯ ಸಂಘದಲ್ಲಿ ವಿದೇಶ ಮಂತ್ರಿ ಶ್ರೀಮತಿ ಲಕ್ಷ್ಮಿ ಮೆನನರು ಮಾತನಾಡಿ, ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷು ಮಾಧ್ಯಮ ಇಂಬೇಕೆಂದು ನುಡಿದರು.

ಸರ್ವೋದಯ ಪರಿಣಾಮಕಾರಿಯಾಗಿ ಇಲ್ಲವೆಂದು ಶ್ರೀಮತಿ ಲಕ್ಷ್ಮಿ ಮೆನನರು ತಿರುನೆಲ್ವೇಲಿಯಲ್ಲಿ ತಿಳಿಸಿದರು.

ಯುಗಾಸ್ಥಾವಿಯಕ್ಕೆ ಹಡಗು ಸಂಚಾರ ನಡೆಸುವ ಒಪ್ಪಂದಕ್ಕೆ ಸಹಿ ಬೀಳಲಿದೆಯೆಂದು ಬೊಂಬಾಯಿ ವಾರ್ತೆ

ಈ ವಾರ ಇಂಡೋನೇಷಿಯಾ ನಿಯೋಗವನ್ನು ಬಂದು ಮಾಡಿ ಸ್ವದೇಶಕ್ಕೆ ತೆಂಳುವುದಾಗಿ ಇಂಡೋನೇಷಿಯಾದ ಪ್ರಧಾನ ಪ್ರತಿನಿಧಿ ವಿಶ್ವಸಂಸ್ಥೆಯಲ್ಲಿ ತಿಳಿಸಿದರು.

ಕೇಂದ್ರ ಸರ್ಕಾರದ ತುಟ್ಟಿ ಭತ್ಯವನ್ನು ತನ್ನ ನೌಕರರಿಗೆ ಮದರಾಸು ಸಂಕಾರ ಜಾರಿಗೆ ಕೊಡಬೇಕಾದರೆ ಐದೂವರೆ ಕೊಟಿ ರೂಪಾಯಿಗಳು ಬೇಕಾಗುವುದು.

★

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್. ಧರ್ಮಾಧಿಕಾರಿ
ರಾಜಕಾರ್ಯಾಸಕ್ತ, ಜೋತಿರ್ವಿದ್ವನ್ಮಣಿ
ಸಂಪತ್ಕೃಷ್ಣ ಜೋಯಿಸರವರಿಂದ

8 ಶುಕ್ರವಾರ ಪಂಚಮಿ ಪೂರ್ವಾಭಾದ್ರ

ಪೌರಸಭೆ

ಮೈಸೂರು ಪೌರಸಭೆಯ ಮುಂದುವರಿದ ಸಭೆ ಈ ಮಾಹೆ 11 ನೆಯ ತಾ|| ಮಧ್ಯಾಹ್ನ 4 ಗಂಟೆಗೆ ಸಮಾವೇಶವಾಗುವುದು

ಸಾಧುಗಳಿಗೆ ಸಂದೇಶ

ಆಧುನಿಕ ಯುಗಕ್ಕೆ ಅನ್ವಯವಾಗುವಂತೆ ಸಂಸ್ಥೆಗಳನ್ನು ಸ್ಥಾಪಿಸಿ ಸನ್ಯಾಸಿಗಳು ಭಾರತೀಯ ತತ್ವಜ್ಞಾನವನ್ನು ಪ್ರಸಾರ ಮಾಡಬೇಕೆಂದು ಭಾರತ ಸಾಧು ಸಮಾಜ ಬಿದನೆಯ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದ ಪಾಟ್ನಾದ ಸ್ವಾಮಿ ಮಂಗಲದೇವಜಿ ಮಹಾರಾಜರು ಚಂಗನಚೇರಿಯಲ್ಲಿ ತಿಳಿಸಿದರು

ಹಿತೋಕ್ತಿ

ವಿದ್ಯಾರ್ಥಿಗಳು ಸ್ವಸಹಾಯದಿಂದ ಮುಂದುವರಿಯ ಬೇಕೆಂದು ಮದ್ರಾಸಿನಲ್ಲಿ ಮಾಜೀರಕ್ಷಣಾ ಮಂತ್ರಿ ಶ್ರೀ ವಿ. ಕೆ. ಮೆನನರು ನುಡಿದರು

ಅನುಮೋದನೆ

ಪಾರ್ಲಿಮೆಂಟು ಭವನದ ಹೊರಗೆ ಸ್ಥಾಪಿಸಲಿರುವ ಲಾಲಾ ಲಜಪತರಾವ್ ಪ್ರತಿಮೆಯನ್ನು ಭಾರತದ ಉಪ ಅಧ್ಯಕ್ಷರಾದ ಡಾ|| ಜಕೀರ ಹುಸೇನರು, ಪ್ರಧಾನಿ ಶಾಸ್ತ್ರಿಯವರು ಅನುಮೋದಿಸಿರುವರು.

ರೋಗಿಷ್ಟರಿಗೆ

ಭಾರತದಲ್ಲಿ ಜೆಸೈರು ಸಂಸ್ಥೆ ಆಶ್ರಯದಲ್ಲಿ ಗುಣವಾಗದ ರೋಗಿಷ್ಟರಿಗಾಗಿ ಕೊಯಮತ್ತೂರಿನಲ್ಲಿ ಒಂದು ಗೃಹ ನಿರ್ಮಿಸಲಾಗುವದು

—

ಹನ್ನೆರಡು ಕಾರ್ಮಿಕ ವೆಲ್ಲು ರಾಜ್ಯಗಳ 44 ಪ್ರತಿನಿದಿಗಳ ಗೋಷ್ಠಿಯನ್ನು ಶಿಕ್ಷಣ ಮಂತ್ರಿ ಶ್ರೀ ಚಾಗಲಾ ಆರಂಭಿಸಿದರು

ವಿಶೇಷ ಅಂಚೆ ಚೀಟಿ

ಭಾರತದಲ್ಲಿ ಕೈಗಾರಿಕಾ ಅಭ್ಯುದಯಕ್ಕೆ ಅಧಾರಸ್ತಂಭಗಳ ಪೈಕಿ ಒಬ್ಬರಾದ ಶ್ರೀ ಜಂಷೆಟ್ಜಿ ತಾತಾರವರ ಸ್ಮರಣಾರ್ಥವಾಗಿ ಇಂದು ಅವರ ಭಾವಚಿತ್ರವಿರುವ ಅಂಚೆ ಚೀಟಿ ಹೊರಡಿಸಲಾಗಿದೆ

ಕೇರಳ ಚುನಾವಣೆ ಮಾರ್ಚಿ 4

ಕೇರಳದಲ್ಲಿ ಮಾರ್ಚಿ 4 ನೇ ತಾ|| ವಿಧಾನ ಸಭೆಯ ಚುನಾವಣೆ ನಡೆಯುವುದೆಂದು ದೆಹಲಿಯಲ್ಲಿ ವಕ್ತಾರರೊಬ್ಬರು ತಿಳಿಸಿದರು ಒಂದೇ ದಿನ ಚುನಾವಣೆ ನಡೆಯುವುದು ಅಂನೇ ತಾ|| ವೇಳೆಗೆ ಎಣಿಕೆ ಆಗವುದು

ಸುಸ್ವಾಗತ

ದುರ್ಗಾಪುರ ಕಾಂಗ್ರೆಸು ಅಧಿವೇಶನದಲ್ಲಿ ಭಾಗವಹಿಸಲು ಪಲಂ ವಿಮಾನ ನಿಲ್ದಾಣಕ್ಕೆ ಪ್ರಧಾನಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರು ಬಂದಾಗ ಜನತೆಯಿಂದ ಅದ್ಭುತ ಸ್ವಾಗತ ದೊರೆಯಿತು ಅವರು ಅಲ್ಲಿಂದ ಮೆರವಣಿಗೆಯಲ್ಲಿ ತೆಂಳಿತು

ಆಗಮನ

ಭೂತಾನಿನ ರಾಜದಂಪತಿಗಳು ನಿನ್ನೆ ಕಲ್ಕತ್ತಾಕ್ಕೆ ಆಗಮಿಸಿದಾಗ ಪಶ್ಚಿಮ ಬಂಗಾಳದ ರಾಜ್ಯಪಾಲರಾದ ಶ್ರೀಮತಿ ಪದ್ಮಜಾ ನಾಯ್ಡುರವರು ಸ್ವಾಗತಿಸಿದರು ಪ್ರಧಾನಿ ಶ್ರೀ ಲಾಲ ಬಹಾದ್ದೂರ ಶಾಸ್ತ್ರಿಯವರ ಭೇಟಿಗಾಗಿ ಒರಿಸ್ಸಾದ ಗೋಪಾಲವುರಕ್ಕೆ ಮಹಾರಾಜರು ತೆಂಳುವರು

× ಭಾರತಾದ್ಯಂನ 750 ವಾಮ ಕಮ್ಯುನಿಸ್ಟರ ಮೇಲ್ಪಟ್ಟು ಬಂಧನವಾಗಿದೆ.

ತೀರ್ಮಾನ ಬದಲಾವಣೆ ಇಲ್ಲ

ವಿಶ್ವಸಂಸ್ಥೆಯನ್ನು ಬಿಟ್ಟು ಬರುವ ತನ್ನ ಜನತೆಯ ನಿರ್ಧಾರವನ್ನು ಇಂಡೋನೇಷಿಯಾ ಬದಲಾಯಿಸುವುದಿಲ್ಲವೆಂದು ಇಂಡೋನೇಷ್ಯ ಅಧ್ಯಕ್ಷ ಸುಕಾರ್ಣೋ ವ್ಯಕ್ತಮಾಡಿರುವುದಾಗಿ ವರದಿ ಇಂಡೋನೇಷ್ಯವನ್ನು ಪೀಕಿಂಗು ರೇಡಿಯೋ ಸಮರ್ಥಿಸಿದೆ.

ಟಂಕು ಹೇಳ್ಕೆ

ಇಂಡೋನೇಷಿಯ ಅಶ್ರಮಣ ನಡೆಸಿದರೆ ವಿಶ್ವಸಂಸ್ಥೆ ಸೇನೆಯನ್ನೊಳಗೊಂಡು ಸರ್ವ ಸಹಾಯ ಮಾಡಬೇಕೆಂದು ಮಲೇಷಿಯಾ ಪ್ರಧಾನಿ ಶ್ರೀ ಟಂಕು ಅಬ್ದಲ್ ರಹಮಾನರು ಕೌಲಾಲಂಪುರದಲ್ಲಿ ನುಡಿದರು

★

ಇದೇ ಕೀತಿ ಜನಸಂಖ್ಯೆ ಬೆಳೆದರೆ ಇನ್ನಿಪ್ಪತ್ತು ವರ್ಷಗಳಲ್ಲಿ ಹಿಂದುಳಿದಿರುವ ದೇಶಗಳು ಬಡತನಕ್ಕೊಳಗಾಗುವದಾಗಿ ಡಾ|| ಚಂದ್ರಶೇಖರರು ತಿಳಿಸಿದರು

★

ಪಾಂಬನ್ ಸೇತುವೆ ನಿರ್ಮಾಣದ ಸಮೀಕ್ಷೆ ಹದಿನೈದು ದಿನಗಳಲ್ಲಿ ಮುಗಿಯುವದಾಗಿ ದುರ್ಗಾಪುರದಲ್ಲಿ ರೈಲ್ವೆ ಮಂತ್ರಿ ಶ್ರೀ ಪಾಟೀಲರು ತಿಳಿಸಿದರು

★

ಸುಮಾರು ರೂ 25 ಕೋಟಿಗಳಷ್ಟು ಸಾಲ ಬೇಕೆಂದು ಭಾರತ ಕೈಗಾರಿಕಾ ಹಾಗೂ ಬಂಡವಾಳ ಸಂಸ್ಥೆಯು ವಿಶ್ವಬ್ಯಾಂಕನ್ನು ಸಾಲ ಕೇಳಿದೆ ಎಂದು ಬೊಂಬಾಯಿ ವಾರ್ತೆ

★

ನೇಪಾಳ ದೊರೆ ಮಹೇಂದ್ರರು ಭಾರತದ ಕೈಗಾರಿಕಾ ಪ್ರದರ್ಶನವನ್ನು ಶುಕ್ರವಾರ ಪ್ರಾರಂಭಿಸುವರು

★

ದುರ್ಗಾಪುರದಲ್ಲಿ ನಿನ್ನೆ ಬೆಳಗ್ಗೆ ಸೇರಿದ್ದ ಕಾಂಗ್ರೆಸು ಕಾರ್ಯಕಾರಿ ಸಮಿತಿ ಅರ್ಥಿಕ ನೀತಿಯನ್ನು ಪರಿಶೀಲಿಸಿತು.

ಹೂವುಗಳ ರಾಣಿ — ಗುಲಾಬಿ

ಗುಲಾಬಿಯು ಸುಂದರ ಪುಷ್ಪವಾಗಿದೆ ; ಸೌಂದರ್ಯದೊಡನೆ ಪರಿಮಳವೂ ಬೆರೆತು ಅದು ಜಗತ್ತಿನ ವಿವಿಧ ಜನರಿಂದಲೂ ಪ್ರೀತ್ಯಾದರಗಳನ್ನು ಗಳಿಸಿದೆ ; ಗುಲಾಬಿಯಲ್ಲಿ ದಾನಾ ವರ್ಣಗಳಿವೆ : ನಾನಾ ತಂದ ಗುಲಾಬಿಗಳೂ ಇವೆ ; ಇದಕ್ಕೆ ಹೂಗಳ ರಾಣಿ ಎಂದು ಹೆಸರಿದೆ. ಜಹಾಂಗೀರನ ಪ್ರೇಯಸಿ ನೂರ್ಗಹಾನಳಿಗೆ ಗುಲಾಬಿ ಪುಷ್ಪವೆಂದರೆ ಬಲು ಪ್ರೀತಿ ; ಇವಳು ಯಾವಾಗಲೂ ಗುಲಾಬಿಗಳನ್ನು ನೀರಿನಲ್ಲಿ ತೇಲಿಸಿ ಆ ನೀರಿನಲ್ಲೇ ಸ್ನಾನಮಾಡುತ್ತಿದ್ದಳು ! ಒಂದು ದಿನ ಹೂವುಗಳು ಕೆಲಸದವರ ಅಲಕ್ಷದಿಂದಾಗಿ ಸ್ನಾನದ ತೊಳದಲ್ಲೇ ಉಳಿದುವು. ಎಂಡು ಮೂರು ದಿನಗಳ ನಂತರ ಒಂದು ಬದಿಯಲ್ಲಿ ತೇಲುತ್ತಿದ್ದ ಹೂಗಳು ರಾಣಿಗೆ ಗೋಚರಿಸಿದವು ; ಅವುಗಳ ಮೇಲ್ಭಾಗದಲ್ಲಿ ಒಂದು ವಿಧದ ಎಣ್ಣೆ ಇತ್ತು : ಅದು ಒಹಳ ಪರಿಮಳದಿಂದ ಕೂಡಿತ್ತು ; ಆ ಪರಿಮಳಕ್ಕೆ ರಾಣಿಯು ಮಾರು ಹೋದಳು ; ಅವಳು ಈ ದ್ರವ್ಯಕ್ಕೆ ' ಅತ್ತರ್ ಜಹಾಂಗೀರ್ ' (ಜಹಾಂಘೀರ್ ಸುಗಂಧ) ಎಂದು ಹೆಸರಿಟ್ಟಳು. ಪರ್ಸಿಯಾ, ಟರ್ಕಿ ಮತ್ತು ಕಾಶ್ಮೀರದ ಕಡೆ ಗುಲಾಬಿಯು ದಪ್ಪವಾಗಿ ಬೆಳೆಯುತ್ತದೆ ; ಗುಲಾಬಿಗಳಿಗೆ ಸುಂದರ ಹೆಸರುಗಳಾಗ ಎಮಿಲಿ ಗ್ರೆ, ಡೊರೊಥಿ, ಪರ್ಕಿನ್ಸ್, ಒಫಿಲಿಯಾ, ಮುಂತಾದ ಹಲವು ಹೆಸರುಗಳನ್ನಿಡಲಾಗಿದೆ : ಗುಲಾಬಿಯು ಅತ್ತರು ಅಥವಾ ಗುಲಾಬಿಯ ಪನ್ನೀರು ಜಗತ್ಪ್ರಸಿದ್ಧವಾಗಿದೆ.

ಪುಣ್ಯ ನಗರ — ಕಲ್ಕತ್ತ

ಭಾರತದ ಮಹಾಶಕ್ತಿಜ್ಞಾನಿ, ಯೋಗಿಪುಂಗವ, ಶ್ರೀ ರಾಮಕೃಷ್ಣ ಪರಮಹಂಸರು ಇಲ್ಲೇ ಜನ್ಮವೆತ್ತಿದರು.

ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ತಮ್ಮ ಅಮೋಘ ಭಾಷಣದಿಂದಿಂದಾಗಿ ಎದೇಶೀಯರ ಮನಸೆಳೆದು ಹಿಂದೂಧರ್ಮದ ಕೀರ್ತಿ ಪತಾಕಿ ಹಾರಿಸಿದ ಸ್ವಾಮಿ ವಿವೇಕಾನಂದರು (ಶ್ರೀರಾಮಕೃಷ್ಣ ಪರಮಹಂಸರ ಶಿಷ್ಯ) ಇಲ್ಲೇ ಜನಿಸಿದರು.

ಜಗತ್ತಿನ ಪ್ರಸಿದ್ಧ ಕವಿಯಾದ, ದೇಶದಲ್ಲಿ ಜನಜಾಗೃತಿಯನ್ನುಂಟು ಮಾಡುವ ಕವಿತೆಗಳನ್ನು ಬರೆದ, ನೋಬಲ್ ಪ್ರಶಸ್ತಿ ಗಳಿಸಿದ ವಿಶ್ವಕವಿ ಶ್ರೀ ರವೀಂದ್ರನಾಥ್ ಠಾಗೂರರು ಇಲ್ಲೇ ಜನ್ಮವೆತ್ತಿದರು.

ಸಬಲ ಆಂಗ್ಲರ ಮುಂದೆ ಸಿಂಹಗರ್ಜನೆ ಮಾಡಿದ ಸುರೇಂದ್ರನಾಥ ಬೆನರ್ಜಿಯವರು ಇಲ್ಲೇ ಆಂಗ್ಲರ ದರ್ಪವನ್ನು ಹತ್ತಿಕ್ಕಲು ಹೆಣಗಿದರು.

ಅಜಾದ ಹಿಂದೂ ಸೈನ್ಯವನ್ನು ಒಂದುಗೂಡಿಸಿ ಶತ್ರುಗಳ ಎದೆ ನಡುಗಿಸಿದ ಸಿಂಹದ ಮರಿಯಾದ ನೇತಾಜಿ ಸುಭಾಸಚಂದ್ರ ಬೋಸರು ಜನಸಿದ ಸ್ಥಳವೂ ಇದೇ ಕಲ್ಕತ್ತ.

ಭಾರತಕ್ಕೆ ಬಂದ ಮಾರ್ಗರೇಟ್ ನೋಬೆಲ್ ಹಿಂದೂ ಧರ್ಮ ದೀಕ್ಷೆಯ ಸ್ಥಳ ಹೊಂದಿ (ಸ್ವಾಮಿ ವಿವೇಕಾನಂದರಿಂದ) ಭಗಿನಿ ನಿವೇದಿತಳಾದುದೂ ಇಲ್ಲೇ.

Help The ' Gorakshana '

ಗೋರಕ್ಷಣೆ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ, ಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಾಗಿದೆ.

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಸ್ವಡಪಾಡಿನಲ್ಲಿ ಗೋರಕ್ಷಣೆ, ಪ್ರಾಣಿದಯೆ, ಶಾಕಾಹಾರ, ಸಶುವೈದ್ಯ ಇ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ ಮಾಸಪತ್ರಿಕೆ.

ವುಡ್‌ಲ್ಯಾಂಡ್ಸ್ ಜನಪ್ರಿಯ 4 ನೇ ವಾರ

ಏಪ್ರಿಲ್ ಫೂಲ್ (ಹಿಂದಿ) April Fool

ಸೈರಾಬಾನು, ಬಿಶ್ವಜಿತ್ ಅಭಿನಯಿಸಿರುವ, ಸ್ವಾರಸ್ಯ ಪ್ರಸಂಗಗಳು, ನಕ್ಕು ನಲಿಸುವ ಹಾಸ್ಯ ವಿನೋದ, ನೃತ್ಯ ಸಂಗೀತದಿಂದ ಕೂಡಿದ ಮನೋಲ್ಲಾಸಿಕ ಕಲಾಕೃತಿ

— ಸುಬೋಧ ಮುಖರ್ಜಿಯವರ ಅಮೋಘ ಈಸ್ಟ್‌ಮೆನ್ ಕಲರ್ ಚಿತ್ರ —

ಸಂತೇತ : ಶಂಕರ್ ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಆಪೆರಾ— ಅಮೋಘ 2 ನೇ ವಾರ

ತಾಯಿನ್ ಮಡಿಯಲ್ [ತಮಿಳು]

★

ನಟವರ್ಗ— ಎಂ ಜಿ ರಾಮಚಂದ್ರನ್, ಬಿ ಸರೋಜಾದೇವಿ, ನಂಬಿಯಾರ್

ಎಂ ಆರ್ ರಾಧಾ, ಪಂಡರಿಬಾಯಿ, ಮನೋರಮಾ [ದಿನ 3 ಆಟಗಳು]

SHAKTI SUDHA

Superb Tonic

ಆಶೋಕಾ ಏಜೆನ್ಸೀಸ್

ಲ್ಯಾನ್‌ಡರ್ನ್ ಬಿಲ್ಡಿಂಗ್ಸ್, ಮೈಸೂರು

.....

ಸಮ್ಮಲ್ಲಿ ಎಲ್ಲ ವಿಧವಾದ ಆಯುರ್ವೇದ ಔಷಧಗಳೂ ದೊರೆಯುತ್ತವೆ.

ಎಲ್ಲಾ ಖಾಯಿಲೆಗಳಿಗೂ ಚಿಕಿತ್ಸೆ ಮಾಡಲಾಗುತ್ತದೆ

ಗೋರಕ್ಷಣ ವ್ಯವಸ್ಥಾಪಕರ ವಿನಂತಿ

★

ಚಂದಾ ವಾಯಿದೆ ಮುಗಿದಿರುವವರು ದಯಮಾಡಿ ಪಾವತಿಮಾಡಬೇಕಾಗಿ ವಿನಂತಿ

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು
ಶ್ರೀ ಬಿ ಬೆ ಶಾಸ್ತ್ರಿಗಳು (ಡ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು
ಶ್ರೀ ಅನಂತನಂಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರ
ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M. S. Krishna Rao
the Satyavadi Press, Chamarajapuram, Mysore 4